**KABG510050562013**

## ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗೋಕಾಕ

:: ಉಪಸ್ಥಿತರು ::

**ರಾಜೀವ ಗೋಳಸಾರ** ಬಿ.ಎ., ಎಲ್.ಎಲ್.ಎಂ.,

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ., ಗೋಕಾಕ.

ದಿನಾಂಕ 25 ನೇ ಜೂನ 2024

## ಅಸಲು ದಾವೆ ನಂ.895/2013

**ವಾದಿ ಃ** ಭರ್ಮಪ್ಪ ಬಸವಂತಪ್ಪ ಪಾಟೀಲ
ವಃ 48 ವರ್ಷ,
ವಾಃ ಬೂದಿಹಾಳ, ತಾಃ ಗೋಕಾಕ, ಜಿ. ಬೆಳಗಾವಿ

**- ವಿರುದ್ಧ -**

**ಪ್ರತಿವಾದಿಯರುಃ** 1. ಬಾಲಗೌಡ ಬಸನಗೌಡ ಪಾಟೀಲ
ವಃ 40 ವರ್ಷ, ವಾಸಃ ಬೂದಿಹಾಳ,
ತಾಃ ಗೋಕಾಕ ಮತ್ತು ಇತರರು

## ಮಧ್ಯಂತರ ಅರ್ಜಿ ಸಂಖ್ಯೆ 8 ರ ಮೇಲೆ ಆದೇಶ

ಸದರಿ ಮಧ್ಯಂತರ ಅರ್ಜಿ 8 ನ್ನು ಅರ್ಜಿದಾರ / ವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆಯ ಆದೇಶ 6 ನಿಯಮ 17 ಹಾಗೂ ಸಹವಾಚಕ ಕಲಂ.151 ರಡಿಯಲ್ಲಿ ಸಲ್ಲಿಸಿ, ತಮ್ಮ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಸಂಗತಿಗಳ ಆಧಾರದ ಮೇಲೆ ವಾದಪತ್ರದ ಖಂಡಿಕೆ 1 ರಲ್ಲಿ 200 ಚದುರ ಅಡಿ ಎಂದು ಇರುವುದನ್ನು ತೆಗೆದುಹಾಕಿ ಆ ಸ್ಥಳದಲ್ಲಿ 600 ಚದುರ ಅಡಿ (ಪೂರ್ವ ಪಶ್ಚಿಮ 40 ಅಡಿ x ದಕ್ಷಿಣೊತ್ತರ 15 ಅಡಿ) ಎಂದು ವಾದಪತ್ರ ತಿದ್ದುಪಡಿ ಮಾಡಿ, ಸೇರಿಸಲು ಅವಕಾಶ ಕಲ್ಪಿಸಿಕೊಡಬೇಕು, ವಾದಪತ್ರದ ಜೊತೆಗೆ ಹಾಜರುಪಡಿಸಿದ ಹಾಥ ನಕಾಶೆಯನ್ನು ತೆಗೆದುಹಾಕಿ ಹೊಸ ಹಾಥ ನಕಾಶೆಯನ್ನು ಸೇರಿಸಲು ಅವಕಾಶ ಕಲ್ಪಿಸಿಕೊಡಬೇಕು ಮತ್ತು ವಾದಪತ್ರದ ಖಂಡಿಕೆ 4 ಆದನಂತರ ಖಂಡಿಕೆ 4(ಎ) ನ್ನು ಸೇರಿಸಲು ಅವಕಾಶ ಕೊಡಬೇಕು ಖಂಡಿಕೆ 4(ಎ) ರಲ್ಲಿ ನ್ಯಾಯಾಲಯದ ಆಯುಕ್ತರ ವರದಿಯ ಪ್ರಕಾರ ಪ್ರತಿವಾದಿ ಈಗಾಗಲೇ ದಾವಾ ಸ್ವತ್ತಿನಲ್ಲಿ ಪೂರ್ವ

ಪಶ್ಚಿಮ 27 ಪೂಟ -04 ಇಂಚು ಮತ್ತು ದಕ್ಷಿಣೊತ್ತರ 15 ಪೂಟ ಹೀಗೆ ಒಟ್ಟು ಪ್ರತಿವಾದಿ 409.99 ಚದುರ ಅಡಿ ದಾವಾ ಸ್ವತ್ತಿನ್ನು ಅತಿಕ್ರಮ ಮಾಡಿಕೊಂಡು ಆರ್ ಸಿ ಸಿ ಕಟ್ಟಡವನ್ನು ದಾವಾ ಸ್ವತ್ತಿನಲ್ಲಿ ನಿರ್ಮಾಣ ಮಾಡಿಕೊಂಡಿರುತ್ತಾನೆ. ಪ್ರತಿವಾದಿ ಅತಿಕ್ರಮಣ ಮಾಡಿ, ಕಟ್ಟಡ ಕಟ್ಟಿದ ಸ್ಥಳದ ಚೆಕ್ಕುಬಂದಿ

ಪೂರ್ವಕ್ಕೆ - ವಾದಿಗೆ ಸೇರಿದ ಉಳಿದ ಸ್ವತ್ತು ಆದಾದನಂತರ ಮೀರಸಾಬ ದೇಸಾಯಿರವರ ಮನೆ

ಪಶ್ಚಿಮಕ್ಕೆ - 30 ಅಡಿ ರಸ್ತೆ,

ದಕ್ಷಿಣಕ್ಕೆ - ಅಪ್ಪಯ್ಯ ಚನ್ನಬಸಪ್ಪ ಕಮಟಗಿ ರವರ ಮನೆ ಅದಾದನಂತರ 03 ಅಡಿ ಹಿತ್ತಲು ಖಾಲಿ ಜಾಗ

ಉತ್ತರಕ್ಕೆ - ಬಾಲಗೌಡ ಬಸನಗೌಡ ಪಾಟೀಲ ರವರ ಮನೆ, ಎಂಬುವುದನ್ನು ಸೇರಿಸಲು ಅವಕಾಶ ಕಲ್ಪಿಸಿಕೊಡಬೇಕು, ತದನಂತರ ಪ್ರತಿವಾದಿ ಕಾನೂನುಬಾಹೀರವಾಗಿ 409-99 ಚದುರ ಅಡಿ ವಾದಿಗೆ ಸೇರಿದ ದಾವಾ ಸ್ವತ್ತಿನಲ್ಲಿ ಕಟ್ಟಡ ನಿರ್ಮಾಣ ಮಾಡಿರುತ್ತಾನೆ. ಉಳಿದ ಸ್ವತ್ತು ಕೇವಲ ಪೂರ್ವ ಪಶ್ಚಿಮ 12 ಪೂಟ 08 ಇಂಚು ಮತ್ತು ದಕ್ಷಿಣೊತ್ತರ 15 ಅಡಿ ಹೀಗೆ ಒಟ್ಟು 109 ಚದುರ ಅಡಿ ದಾವಾ ಸ್ವತ್ತು ಮಾತ್ರ ಉಳಿದಿರುತ್ತದೆ ಎಂದು ಸೇರಿಸಲು ಅವಕಾಶ ಕಲ್ಪಿಸಿಕೊಡಬೇಕು, ಹಾಗೂ ಪ್ರಾರ್ಥನ ಖಂಡಿಕೆ A(a) ಆದನಂತರ ದಕ್ಷಿಣ ದಿಕ್ಕಿನ 04 ಅಡಿ ಪೂರ್ವ ದಿಕ್ಕಿನ 4 ಅಡಿ ಎಂಬುವುದನ್ನು ತೆಗೆದುಹಾಕಿ ಆ ಸ್ಥಳದಲ್ಲಿ ಪೂರ್ವ-ಪಶ್ಚಿಮ 27 ಅಡಿ 04 ಇಂಚು ದಕ್ಷಿಣೊತ್ತರ 15 ಅಡಿ, ಒಟ್ಟು 409.99 ಚದುರ ಅಡಿ ಎಂಬುವುದನ್ನು ತಿದ್ದುಪಡಿ ಮಾಡಿ ಸೇರಿಸಲು ಅವಕಾಶ ಕಲ್ಪಿಸಿಕೊಡಬೇಕು ಎಂದು ಕೋರಿಕೊಂಡು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ಸದರಿ ಅರ್ಜಿಗೆ ಪೂರ್ವಕವಾಗಿ ಅರ್ಜಿದಾರ / ವಾದಿಯು ತಮ್ಮ ಪ್ರಮಾಣ ಪತ್ರ ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿ ತಾನು ಈ ದಾವೆಯಲ್ಲಿ ವಾದಿಯಾಗಿದ್ದು, ತನಗೆ ದಾವಾ ಸ್ವತ್ತಿನ ವಸ್ತುಸ್ಥಿತಿ ಗೊತ್ತಿರುವುದರಿಂದ ತಾನು ಪ್ರಮಾಣ ಪತ್ರ ಮಾಡಿರುವುದಾಗಿ, ತಾನು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾವಾ ಸ್ವತ್ತಿನ ಕುರಿತು ಶಾಶ್ವತ ತಡೆಯಾಜ್ಞೆ ಪರಿಹಾರ ಕೋರಿ ಸಲ್ಲಿಸಿರುವುದಾಗಿ ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಬೆರಳಚ್ಚು ಮುದ್ರಣ ಲೋಪದಿಂದಾಗಿ ದಾವಾ ಸ್ವತ್ತಿನ ವಿಸ್ತೀರ್ಣವನ್ನು ವಾದಪತ್ರದ ಖಂಡಿಕೆ 1 ರಲ್ಲಿ 200 ಚದುರ ಅಡಿ ಎಂದು ತಪ್ಪಾಗಿ ತೋರಿಸಿದ್ದು, ವಾಸ್ತವದಲ್ಲಿ ದಾವಾ ಸ್ವತ್ತಿನ ವಿಸ್ತೀರ್ಣ 600 ಚದುರ ಅಡಿ (ಪೂರ್ವ ಪಶ್ಚಿಮ - 40 ಅಡಿ X ದಕ್ಷಿಣೊತ್ತರ 15 ಅಡಿ ) ಇರುತ್ತದೆ ಹಾಗೂ ಪ್ಯಾರ ನಂ.4(ಎ)

ನ್ನು ಸೇರಿಸಲು ಮತ್ತು ವಾದಪತ್ರದ ಜೊತೆಗೆ ಸಲ್ಲಿಸಿದ ಹಾಥ ನಕಾಶೆಯನ್ನು ಬದಲಾಯಿಸಿ ಸೇರಿಸಲು ಮತ್ತು ನ್ಯಾಯಾಲಯದ ಆಯುಕ್ತರ ವರದಿಯ ಪ್ರಕಾರ ಅರ್ಜಿಯಲ್ಲಿ ತಿಳಿಸಿರುವ ವಿವರಣೆಯನ್ನು ವಾದಪತ್ರದಲ್ಲಿ ಸೇರಿಸಲು ಅವಕಾಶ ಕಲ್ಪಿಸಿಕೊಡಬೇಕು, ಸದರಿ ಎಲ್ಲಾ ಸಂಗತಿಗಳು ತಮಗೆ ಇತ್ತಿಚೆಗೆ ಗೊತ್ತಾಗಿರುವುದರಿಂದ ತಾವು ಈ ತಿದ್ದುಪಡಿಗಾಗಿ ಅರ್ಜಿಯನ್ನು ಸಲ್ಲಿಸಿರುದಾಗಿ ತಮ್ಮ ಪ್ರಮಾಣ ಪತ್ರದಲ್ಲಿ ನಿವೇದಿಸಿಕೊಂಡಿರುತ್ತಾರೆ.

3. ಮುಂದುವರೆದು ಅರ್ಜಿದಾರ / ವಾದಿಯು ತಮ್ಮ ಪ್ರಮಾಣ ಪತ್ರದಲ್ಲಿ ಭಾವಿತ ತಿದ್ದುಪಡಿಗಾಗಿ ಸಲ್ಲಿಸಿದ ಅರ್ಜಿಯು ದಾವೆಯ ಸ್ವರೂಪವನ್ನು ಬದಲಾಯಿಸುವುದಿಲ್ಲ ಒಂದು ವೇಳೆ ಮಧ್ಯಂತರ ಅರ್ಜಿಯನ್ನು ಪುರಸ್ಕಾರ ಮಾಡದೆ ಹೋದಲ್ಲಿ ವಿವಿಧ ದಾವೆಗಳಿಗೆ ಕಾರಣ ಮಾಡಿಕೊಟ್ಟಂತಾಗುತ್ತದೆ ಹಾಗೂ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸದೆ ಹೋದರೆ ತಮಗೆ ತುಂಬಲಾರದ ನಷ್ಟ ವ ಹಾನಿ ಉಂಟಾಗುತ್ತದೆ. ಮಧ್ಯಂತರ ಅರ್ಜಿಯನ್ನು ಪುರಸ್ಕರಿಸುವುದರಿಂದ ಎದುರುದಾರರಿಗೆ ಯಾವುದೇ ಹಾನಿ ವ ತೊಂದರೆ ಉಂಟಾಗುವುದಿಲ್ಲ. ಹೀಗಾಗಿ ಮಧ್ಯಂತರ ಅರ್ಜಿಯನ್ನು ನ್ಯಾಯೋಚಿತ ದೃಷ್ಟಿಯಿಂದ ಪುರಸ್ಕಾರ ಮಾಡಬೇಕು ಎಂದು ಪ್ರಮಾಣ ಪತ್ರದಲ್ಲಿ ನಿವೇದಿಸಿಕೊಂಡಿರುತ್ತಾರೆ.

4. ಸದರಿ ಮಧ್ಯಂತರ ಅರ್ಜಿಗೆ ಪ್ರತಿವಾದಿಯರ ಪರ ವಕೀಲರು ತಮ್ಮ ತಕರಾರು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿ ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ತಿಳಿಸಿರುವ ಸಂಗತಿಗಳು ನಿಜವಾಗಿರುವುದಿಲ್ಲ. ಅರ್ಜಿದಾರರು ಸಲ್ಲಿಸಿದ ಈ ಅರ್ಜಿಯು ಕಾನೂನಿನಡಿಯಲ್ಲಾಗಲೀ, ವಸ್ತುವಿಷಯದಡಿಯಲ್ಲಾಗಲೀ ನಿಲ್ಲುವಂತಹದಲ್ಲಾ, ವಿವಾದಿತ ನ್ಯಾಯಾಲಯದ ಆಯುಕ್ತರ ವರದಿಯನ್ನು ಆಧಾರಿಸಿ ವಾದಿ ತನ್ನ ವಾದಪತ್ರವನ್ನು ತಿದ್ದುಪಡಿ ಮಾಡಲು ಈ ಅರ್ಜಿ ಸಲ್ಲಿಸಿರುತ್ತಾರೆ. ನ್ಯಾಯಾಲಯದ ಆಯುಕ್ತರ ವರದಿಯು ಅಂತಿಮ ರುಜುವಾತು ಆಗಿರುವುದಿಲ್ಲ. ಈ ಹಂತದಲ್ಲಿ ನ್ಯಾಯಾಲಯದ ಆಯುಕ್ತರವರ ವರದಿಯನ್ನು ನ್ಯಾಯಾಲಯವು ಪರಿಗಣಿಸಲು ಬರುವುದಿಲ್ಲ. ನ್ಯಾಯಾಲಯದವರು ದಾವೆಯ ವಸ್ತು ಸ್ಥಿತಿ, ದಾವಾ ಸ್ವತ್ತಿನ ಸ್ವರೂಪ ಮತ್ತು ದಾವೆಯನ್ನು ದಾಖಲಿಸಿದ ದಿನಾಂಕವನ್ನು ಪರಿಗಣಿಸಬೇಕೆ ವಿನಃ ದಾವೆ ಸಲ್ಲಿಸಿದ ನಂತರದಲ್ಲಿ ಆದ ಬೆಳವಣಿಗಳನ್ನು ಆಧಾರಿಸಿ ವಾದಪತ್ರವನ್ನು ತಿದ್ದುಪಡಿ ಮಾಡಲು ಅವಕಾಶ ಕಲ್ಪಿಸಿಕೊಡಬಾರದು ಈ ದಾವೆಯಲ್ಲಿ ಈಗಾಗಲೇ ಉಭಯ ಪಕ್ಷಗಾರರ ಪರ ಸಾಕ್ಷಿ ವಿಚಾರಣೆ ಮುಕ್ತಾಯವಾಗಿರುತ್ತವೆ. ಆದಾದನಂತರ ಈ ಹಂತದಲ್ಲಿ ವಾದಿ ತಮ್ಮ ವಾದಪತ್ರದಲ್ಲಿ ಬೆರಳಚ್ಚು ಮುದ್ರಣ ಲೋಪದಿಂದಾಗಿ ದಾವಾ ಸ್ವತ್ತಿನ ವಿಸ್ತೀರ್ಣವನ್ನು ತಪ್ಪಾಗಿ ನಮೂದು ಮಾಡಿರುವುದಾಗಿ, ತಿಳಿಸಿದ

ಲೋಪವನ್ನು ಸರಿಪಡಿಸಿಕೊಳ್ಳಲು ಅವಕಾಶಕಲ್ಪಿಸಿಕೊಡಲು ಬರುವುದಿಲ್ಲ. ಈ ದಾವೆಯಲ್ಲಿ ವಾದಿ ಮತ್ತು ಸಾಕ್ಷಿದಾರರು ತಮ್ಮ ಸಾಕ್ಷಿ ವಿಚಾರಣೆಯನ್ನು ನೀಡಿರುತ್ತಾರೆ. ಸದರಿ ಸಾಕ್ಷಿ ವಿಚಾರಣೆಯಲ್ಲಿಯೂ ಸಹ ಪ್ರತಿವಾದಿ 600 ಅಡಿ ದಾವಾ ಸ್ವತ್ತನ್ನು ಅತಿಕ್ರಮಣ ಮಾಡಿರುತ್ತಾನೆ ಎಂದು ತಿಳಿಸಿರುವುದಿಲ್ಲ. ಈ ದಾವೆಯಲ್ಲಿ ವಾದಿ ಪರ ವಕೀಲರು ಡಿಡಬ್ಲೂ 1 ರವರಿಗೂ ಸಹ ಪಾಟಿ ಸವಾಲು ಮಾಡಿರುತ್ತಾರೆ. ಸದರಿ ಪಾಟಿ ಸವಾಲಿನಲ್ಲಿಯೂ ಸಹ ಪ್ರತಿವಾದಿಯರು ದಾವಾ ಸ್ವತ್ತಿನ 600 ಚದುರ ಅಡಿ ವಿಸ್ತೀರ್ಣವನ್ನು ಅತಿಕ್ರಮಣ ಮಾಡಿಕೊಂಡಿರುವ ಕುರಿತು. ಯಾವುದೇ ಸಲಹೆಯನ್ನು ಸಹ ಮಾಡಿರುವುದಿಲ್ಲ. ವಾದಿಯು ತಮ್ಮ ವಾದಪತ್ರವನ್ನು ಸಾಕ್ಷಿ ವಿಚಾರಣೆ ಮಾಡಿಕೊಳ್ಳುವ ಪೂರ್ವದಲ್ಲಿ ತಿದ್ದುಪಡಿ ಮಾಡಿಕೊಳ್ಳಬಹುದೆ ವಿನಃ ಸಾಕ್ಷಿ ವಿಚಾರಣೆ ಮುಕ್ತಾಯವಾದ ನಂತರ ತಿದ್ದುಪಡಿ ಮಾಡಿಕೊಳ್ಳಲು ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 6 ನಿಯಮ 17 ಅಡಿ ಬರುವುದಿಲ್ಲ. ಹೀಗಾಗಿ ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಲು ಯಾವುದೇ ಸಕಾರಣಗಳನ್ನು ನೀಡಿರುವುದಿಲ್ಲ ಎಂದು ತಮ್ಮ ತಕರಾರಿನಲ್ಲಿ ನಿವೇದಿಸಿಕೊಂಡಿರುತ್ತಾರೆ.

5. ಮುಂದುವರೆದು ಎದುರುದಾರ / ಪ್ರತಿವಾದಿಯರು ತಮ್ಮ ತಕರಾರಿನಲ್ಲಿ ವಾದಿ ಈ ದಾವೆಯನ್ನು 2013 ರಲ್ಲಿ ಸಲ್ಲಿಸಿದ್ದು, 09 ವರ್ಷಗಳು ಮುಗಿದ ನಂತರ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯನ್ನು ಪುರಸ್ಕರಿಸಲು ಯಾವುದೇ ಸಕಾರಣಗಳನ್ನು ವಾದಿ ನೀಡಿರುವುದಿಲ್ಲ. ವಾದಿ ಈ ಅರ್ಜಿಯನ್ನು ನ್ಯಾಯಾಲಯದ ಆಯುಕ್ತರ ವರದಿಯನ್ನು ಆಧಾರಿಸಿ ನೀಡಿರುತ್ತಾರೆ. ಸದರಿ ನ್ಯಾಯಾಲಯದ ಆಯುಕ್ತರ ವರದಿಗೆ ಪ್ರತಿವಾದಿಯು ತಮ್ಮ ತಕರಾರನ್ನು ಈಗಾಗಲೇ ಸಲ್ಲಿಸಿರುತ್ತಾರೆ, ನ್ಯಾಯಾಲಯದ ಆಯುಕ್ತರವರ ವರದಿಯನ್ನು ನ್ಯಾಯಾಲಯದವರು ಒಪ್ಪಿಕೊಳ್ಳದ ಹೊರತು ಅರ್ಜಿದಾರರು ಸಲ್ಲಿಸಿರುವ ಈ ಅರ್ಜಿಯನ್ನು ಪುರಸ್ಕಾರ ಮಾಡಲು ಬರುವುದಿಲ್ಲ. ಆಯುಕ್ತರ ವರದಿಯನ್ನು ಮಾತ್ರ ಆಧಾರಿಸಿ ಈ ದಾವೆಯನ್ನು ವಿಲೇವಾರಿ ಮಾಡಲು ಆಗುವುದಿಲ್ಲ. ಪ್ರತಿವಾದಿಯರು ದಾವಾ ಸ್ವತ್ತಿನ್ನು ಯಾವತ್ತು ಅತಿಕ್ರಮಣ ಮಾಡಿರುವುದಿಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ವಾದಿ ಇದೊಂದು ಸುಳ್ಳು ದಾವೆ ಸಲ್ಲಿಸಿರುತ್ತಾನೆ. ಒಂದು ವೇಳೆ ಮಧ್ಯಂತರ ಅರ್ಜಿಯನ್ನು ಪುರಸ್ಕಾರ ಮಾಡಿದರೆ ದಾವೆಯ ಸಂಪೂರ್ಣ ಸ್ವರೂಪ ಬದಲಾಗುತ್ತದೆ ಹಾಗೂ ಪ್ರತಿವಾದಿಗೆ ತುಂಬಲಾರದ ನಷ್ಟ ವ ಹಾನಿ ಉಂಟಾಗುತ್ತದೆ. ಹೀಗಾಗಿ ಅರ್ಜಿದಾರ / ವಾದಿ ಸಲ್ಲಿಸಿರುವ ಈ ಮಧ್ಯಂತರ ಅರ್ಜಿಯನ್ನು ಖರ್ಚು ಸಮೇತ ವಜಾಗೊಳಿಸಬೇಕೆಂದು ತಮ್ಮ ತಕರಾರಿನಲ್ಲಿ ನಿವೇದಿಸಿಕೊಂಡಿರುತ್ತಾರೆ.

6. ಮಧ್ಯಂತರ ಅರ್ಜಿ 8 ರ ಮೇಲೆ ಉಭಯಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು. ಅರ್ಜಿದಾರ/ವಾದಿಯ ಪರ ವಕೀಲರು ಸಲ್ಲಿಸಿದ ಲಿಖಿತ ವಾದಮಂಡನೆಯನ್ನು ಪರಿಶೀಲನೆ ಮಾಡಲಾಯಿತು. ಹೀಗಾಗಿ ಈ ಮಧ್ಯಂತರ ಅರ್ಜಿಯ ವಿಲೇವಾರಿಗೆ ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ಗಮನಕ್ಕೆ ಉದ್ಭವವಾಗಿರುತ್ತವೆ.

1. ವಾದಿ / ಅರ್ಜಿದಾರರು ದಿವಾಣಿ ಪ್ರಕ್ರಿಯಾ ಸಂಹಿತೆಯ ಆದೇಶ 6 ನಿಯಮ 17 ಸಹವಾಚಕ ಕಲಂ 151 ರಡಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ 8 ನ್ನು ಪುರಸ್ಕರಿಸಲು ಸಕಾರಣಗಳನ್ನು ನೀಡಿರುತ್ತಾರೆಯೆ?
2. ಯಾವ ಆದೇಶ ?

**7.** ಮೇಲಿನ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸುತ್ತೇನೆ.
ಅಂಶ ನಂ.1: ಸಕಾರಾತ್ಮಕವಾಗಿ.
ಅಂಶ ನಂ.2: ಅಂತಿಮ ಆದೇಶದಂತೆ ಈ ಕೆಳಕಂಡ.

## ಕಾರಣಗಳು

**8.** **ಅಂಶ ನಂ.1 ಕ್ಕೆ:** ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾವಾ ಸ್ವತ್ತಿನ ಕುರಿತು ಆಜ್ಞಾತ್ಮಕ ಆದೇಶ, ಸ್ವಾಧೀನತೆಯ ಪರಿಹಾರ ಹಾಗೂ ಶಾಶ್ವತ ತಡೆಯಾಜ್ಞೆ ಪರಿಹಾರ ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾನೆ. ವಾದ ಪತ್ರವನ್ನು ಗಮನಿಸಿದಾಗ ದಾವಾ ಸ್ವತ್ತು ಮೂಲತಃ ಸಿದ್ದವ್ವ ನಿಂಗಪ್ಪ ಪಾಟೀಲ ರವರಿಗೆ ಸೇರಿದ ಸ್ವತ್ತಾಗಿದ್ದು, ದಾವಾ ಸ್ವತ್ತನ್ನು ದಿನಾಂಕ 08-04-1963 ರಂದು ಗಿಫ್ಟ್ ಡೀಡ ಪ್ರಕಾರ ವಾದಿಯ ತಂದೆಯಾದ ಬಸವಂತಪ್ಪ ತಂದೆ ಅಪ್ಪಣ್ಣ ಪಾಟೀಲ ರವರಿಗೆ ನೀಡಿದ್ದು, ಸದರಿ ಗಿಫ್ಟ್ ಡೀಡ ಪ್ರಕಾರ ವಾದಿಯ ತಂದೆಯ ಹೆಸರು ದಾವಾ ಸ್ವತ್ತಿನ ಕಂದಾಯ ದಾಖಲಾತಿಗಳಲ್ಲಿ ದಾಖಲಾಗಿದ್ದು, ದಾವಾ ಸ್ವತ್ತಿನ ವಿಸ್ತೀರ್ಣ 200 ಚದುರ ಯಾರ್ಡ ಇದ್ದು, ವಾದಪತ್ರದಲ್ಲಿ 200 ಅಡಿ ಎಂದು ಖಂಡಿಕೆ 1 ರಲ್ಲಿ ಬೆರಳಚ್ಚು ಮುದ್ರಣ ಲೋಪದಿಂದಾಗಿ ಬರೆಸಿರುವುದಾಗಿ ವಾದಿಯ ಪರ ವಕೀಲರು ತಮ್ಮ ವಾದಮಂಡನೆಯಲ್ಲಿ ತಿಳಿಸಿರುತ್ತಾರೆ. ದಾವಾ ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ -40 ಚದುರ ಅಡಿ ಮತ್ತು ದಕ್ಷಿಣೊತ್ತರ 15 ಚದುರ ಅಡಿ ಹೀಗೆ ಒಟ್ಟು 600 ಚದುರ ಅಡಿ ಇರುತ್ತದೆ. ಹೀಗಾಗಿ ವಾದಪತ್ರದ ಖಂಡಿಕೆ 1 ರಲ್ಲಿ ದಾವಾ ಸ್ವತ್ತಿನ ವಿಸ್ತೀರ್ಣ 200 ಚದುರ ಅಡಿ ಎಂಬುವುದನ್ನು ತೆಗೆದು ಹಾಕಿ ಆ ಸ್ಥಳದಲ್ಲಿ 600 ಚದುರ ಅಡಿ (ಪೂರ್ವ ಪಶ್ಚಿಮ -40 ಅಡಿ ದಕ್ಷಿಣೋತ್ತರ 15 ಅಡಿ ಸೇರಿಸಲು ಅವಕಾಶ ಕಲ್ಪಿಸಿಕೊಡಬೇಕು ಎಂದು ತಿಳಿಸಿರುವುದು ಕಂಡು ಬರುತ್ತದೆ. ದಾವಾ ಸ್ವತ್ತು ಮೂಲತಃ ಸಿದ್ದವ್ವ ಗಂಡ ನಿಂಗಪ್ಪಪಾಟೀಲ ರವರಿಗೆ ಸೇರಿದ ಸ್ವತ್ತಾಗಿದ್ದು, ಅದನ್ನು ದಿನಾಂಕ

08-04-1963 ವಾದಿಯ ತಂದೆ ಯಾದ ಬಸವಂತಪ್ಪ ತಂದೆ ಅಪ್ಪಣ್ಣ ಪಾಟೀಲ ರವರಿಗೆ ನೊಂದಾಯಿತ ಗಿಫ್ಟ್ ಡೀಡ ಮುಖಾಂತರ ನೀಡಿರುವುದು ಲಭ್ಯವಿರುವ ನಿಪಿ.1 ರ ದಾಖಲೆಯಿಂದ ಕಂಡು ಬರುತ್ತದೆ. ದಾವಾ ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ -40 ಅಡಿ ದಕ್ಷಿಣೊತ್ತರ 15 ಅಡಿ ಇರುವುದು ಕಂಡು ಬರುತ್ತದೆ. ಅದರಂತೆ ದಾವಾ ಸ್ವತ್ತಿನ ವಿಸ್ತೀರ್ಣ ಒಟ್ಟು 200 ಚದುರ ಯಾರ್ಡ ಇರುವುದು ಕಂಡು ಬರುತ್ತದೆ. ಒಂದು ಚದುರ ಯಾರ್ಡ ಎಂದರೆ 03 ಚದುರ ಅಡಿ ಆಗಿರುತ್ತದೆ. ಹೀಗಾಗಿ ದಾವಾ ಸ್ವತ್ತಿನ ವಿಸ್ತೀರ್ಣ ಒಟ್ಟು 600 ಚದುರ ಅಡಿ ಇರುವುದು ಕಂಡು ಬರುತ್ತದೆ. ಸದರಿ ಸಂಗತಿಯನ್ನು ವಾದಪತ್ರದಲ್ಲಿ ಸೇರಿಸಲು ಅವಕಾಶ ನೀಡದೆ ಹೋದರೆ ಅನೇಕ ದಾವೆಗಳಿಗೆ ಅವಕಾಶ ಕಲ್ಪಿಸಿಕೊಟ್ಟಂತಾಗುತ್ತದೆ.

ದಿವಾಣಿ ಪ್ರಕಿಯಾ ಸಂಹಿತೆಯ ಆದೇಶ 6 ನಿಯಮ 17 ನ್ನು ಗಮನಿಸಿದಾಗ ನ್ಯಾಯೋಚಿತವಾಗಬಹುದಾದ ರೀತಿಯಲ್ಲಿ ಮತ್ತು ಅಂತಹ ನಿಬಂಧನೆಗಳ ಮೇಲೆ ಯಾವನೇ ಪಕ್ಷಗಾರನ, ವಾದ, ಪ್ರತಿವಾದ ಪತ್ರವನ್ನು ಬದಲಾಯಿಸಲು ಅಥವಾ ತಿದ್ದುಪಡಿ ಮಾಡಲು ವ್ಯವಹರಣೆಯ ಯಾವುದೇ ಹಂತದಲ್ಲಿ ನ್ಯಾಯಾಲಯವು ಅವನಿಗೆ ಅವಕಾಶ ಕೊಡಬಹುದು ಮತ್ತು ಪಕ್ಷಕಾರರ ನಡುವೆ ವಿವಾದದಲ್ಲಿರುವ ನಿಜವಾದ ಪ್ರಶ್ನೆಗಳನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಅವಶ್ಯವಾಗ ಬಹುದಾದಂತಹ ಎಲ್ಲಾ ದುರಸ್ಥಿಗಳನ್ನು ಮಾಡತಕ್ಕದ್ದು ಎನ್ನುವ ಕುರಿತು ವಿವರಿಸುತ್ತದೆ.

9. ವಾದಿ ತಮ್ಮ ವಾದಪತ್ರದ ಖಂಡಿಕೆ 1 ರಲ್ಲಿ ದಾವಾ ಸ್ವತ್ತಿನ ವಿಸ್ತೀರ್ಣ 200 ಚದುರ ಅಡಿ ಎಂದು ತಿಳಿಸಿದ್ದು ಸದರಿ ಸಂಗತಿಯು ಬೆರಳಚ್ಚು ಮುದ್ರಣ ಲೋಪದಿಂದ ಆಗಿರುವುದು ಈ ನ್ಯಾಯಾಲಯಕ್ಕೆ ಕಂಡು ಬರುತ್ತದೆ. ವಾದಿ ಈ ದಾವೆಯನ್ನು 2013 ನೇ ಸಾಲಿನಲ್ಲಿ ಸಲ್ಲಿಸಿದ್ದು, ಈ ಅರ್ಜಿಯನ್ನು ದಿನಾಂಕ 10-03-2022 ರಲ್ಲಿ ಸಲ್ಲಿಸಿರುವುದು ಕಂಡು ಬರುತ್ತದೆ, ಈ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಉಭಯ ಪಕ್ಷಗಾರರ ಪರ ಸಾಕ್ಷಿ ವಿಚಾರಣೆ ಮುಕ್ತಾಯವಾಗಿರುವುದು ಕಂಡು ಬರುತ್ತದೆ. ವಾದಿ ತಮ್ಮ ಅರ್ಜಿಯಲ್ಲಿ ಮತ್ತು ತಮ್ಮ ಪ್ರಮಾಣ ಪತ್ರದಲ್ಲಿ ತಮಗೆ ದಾವಾ ಸ್ವತ್ತಿನ ವಿಸ್ತೀರ್ಣ ತಪ್ಪಾಗಿ ನಮೂದಿಸಿರುವುದು ಇತ್ತಿಚೆಗೆ ಗಮನಕ್ಕೆ ಬಂದಿರುತ್ತದೆ ಎಂದು ತಿಳಿಸಿದ್ದು, ಸದರಿ ಸಂಗತಿಯನ್ನು ಸಾಕ್ಷಿ ವಿಚಾರಣೆ ಪ್ರಾರಂಭವಾಗುವ ಪೂರ್ವದಲ್ಲಿ ತಿದ್ದುಪಡಿ ಮಾಡಕೊಳ್ಳದೆ ಇರುವುದು ಕಂಡು ಬರುತ್ತದೆ. ಹೀಗಾಗಿ ವಿಳಂಬವಾಗಿದೆ ಎನ್ನುವ ಕಾರಣ ಮಾತ್ರದಿಂದ ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಕೋರಿರುವ ಪರಿಹಾರವನ್ನು ಮಂಜೂರು ಮಾಡದೆ ಇರುವುದು ಸೂಕ್ತ ಮತ್ತು ಸಮಂಜಸ ಎನಿಸುವುದಿಲ್ಲ. ಅದರಂತೆ ವಾದಪತ್ರದ ಖಂಡಿಕೆ 4 ಆದ ನಂತರ 4(ಎ)

ಅನ್ನು ಅರ್ಜಿಯಲ್ಲಿ ತಿಳಿಸಿರುವ ಸಂಗತಿಗಳನ್ನು ಸೇರಿಸಲು ವಾದಿಗೆ ಅವಕಾಶ ಕಲ್ಪಿಸಿಕೊಟ್ಟರೆ ಈ ದಾವೆ ಸಲ್ಲಿಸಿಯಾದ ನಂತರದ ವಿವರಣೆಯನ್ನು ವಾದಿ ತಮ್ಮ ವಾದಪತ್ರದಲ್ಲಿ ವಿವರಿಸಲು ಅವಕಾಶ ನೀಡಿದಂತಾಗುತ್ತದೆ. ಅದರಂತೆ ಪ್ರಾರ್ಥನಾ ಖಂಡಿಕೆಯಲ್ಲಿ 4 ಅಡಿ ದಕ್ಷಿಣ ಮತ್ತು ಪೂರ್ವಕ್ಕೆ ಎಂದು ತಿಳಿಸಿರುವ ಸ್ಥಳದಲ್ಲಿ ಪೂರ್ವ ಪಶ್ಚಿಮ - 27.4 ಅಡಿ, ದಕ್ಷಿಣೊತ್ತರ 15 ಅಡಿ ಎಂದು ಸೇರಿಸಲು ವಾದಿಗೆ ಸ್ವಲ್ಪ ಖರ್ಚು ವಿಧಿಸಿ ಪುರಸ್ಕಾರ ಮಾಡುವುದು ನ್ಯಾಯೋಚಿತ ದೃಷ್ಟಿಯಿಂದ ಸೂಕ್ತ ಮತ್ತು ಸಮಂಜಸ ಎಂದು ಈ ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ. ಅದರಂತೆ ಸದರಿ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸುವುದರಿಂದ ದಾವೆಯ ಸ್ವರೂಪ ಬದಲಾಗುವುದಿಲ್ಲ ಮುದ್ರಣ ಲೋಪದಿಂದ ಆಗಿರುವ ತಪ್ಪು ಸಂಗತಿಗಳನ್ನು ಸರಿಪಡಿಸಿಕೊಳ್ಳಲು ವಾದಿಗೆ ಅವಕಾಶ ಕಲ್ಪಿಸಿಕೊಡುವುದು ಸೂಕ್ತವೆಂದು ಪರಿಗಣಿಸಿ ಅಂಶ 1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

**10.** **ಅಂಶ ನಂ.2:** ಮೇಲಿನ ಅಂಶ ನಂ.1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಿರುವುದರಿಂದ , ಈ ಕೆಳಗಿನಂತೆ.

## ಆದೇಶ

- ಅರ್ಜಿದಾರ/ವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 6 ನಿಯಮ 17 ಹಾಗೂ ಸಹವಾಚಕ ಕಲಂ.151 ರಡಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ 8 ನ್ನು ರೂ.1,000/- ಖರ್ಚು ವಿಧಿಸುವ ಮೂಲಕ ಪುರಸ್ಕರಿಸಲಾಗಿದೆ.
- ಸದರಿ ಖರ್ಚಿನ ಹಣವನ್ನು ವಾದಿಯು ಪ್ರತಿವಾದಿಯರಿಗೆ ಸಂದಾಯ ಮಾಡಲು ನಿರ್ದೇಶಿಸಲಾಗಿದೆ.
- ವಾದಪತ್ರವನ್ನು ತಿದ್ದುಪಡಿ ಮಾಡಿ, ತಿದ್ದುಪಡಿ ಮಾಡಿದ ವಾದಪತ್ರ ಸಲ್ಲಿಸಲು ದಿನಾಂಕ 02-07-2024 ರಂದು ಕೂಗಿ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನದಂತೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದನ್ನು ಪರಿಷ್ಕರಿಸಿ, ತೆರೆದ ನ್ಯಾಯಾಲಯದಲ್ಲಿ ಆದೇಶವನ್ನು ದಿನಾಂಕ 25-06-2024 ರಂದು ಘೋಷಿಸಲಾಗಿದೆ.)

**(ರಾಜೀವ ಗೋಳಸಾರ)**
**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ಗೋಕಾಕ.**